**ಸಾಕ್ಷಿಗೆ ದಿನಾಂಕಃ 05-06-2024 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರಃ ಶ್ರೀ. ಹೆಚ್ ಆರ್ ಎ ವಕೀಲರಿಂದ :**

ದಾವಾ ಆಸ್ತಿಗೆ ಸಂಬಂಧ ಪಟ್ಟಂತೆ ನಾನು ಈ ಹಿಂದೆ ಇದೇ ನ್ಯಾಯಾಲಯದಲ್ಲಿ ಒ ಎಸ್ 6/2010 ರಂತೆ ದಾವೆ ಹೂಡಿರುತ್ತೇನೆ ಎಂದರೆ ಸರಿ. ಸದರಿ ದಾವೆಯನ್ನು ನಾನು ರಾಜೇಂದ್ರ ಯಾನೆ ಸಂತೋಷ್ ಕುಮಾರ್ ಎನ್ನುವವರ ವಿರುದ್ಧ ಹೂಡಿದ್ದೆ ಎಂದರೆ ಸರಿ. ಸದರಿ ದಾವೆಯಲ್ಲಿ ಸ್ವತಃ ನಾನೇ ಸಾಕ್ಷಿಯನ್ನು ನುಡಿದಿದ್ದೆ ಎಂದರೆ ಸರಿ. ಸದರಿ ದಾವೆಯ ಪ್ರತಿವಾದಿ ರಾಜೇಂದ್ರ ಯಾನೆ ಸಂತೋಷ್ ಕುಮಾರ್ ಎನ್ನುವವರನ್ನು ಪ್ರಸ್ತುತ ದಾವೆಯಲ್ಲಿ ಪ್ರತಿವಾದಿಯಾಗಿ ಮಾಡಿರುವುದಿಲ್ಲ ಎಂದರೆ ಸರಿ.

2. ಒ ಎಸ್ 6/2010 ದಾವೆಯನ್ನು ಈ ನ್ಯಾಯಾಲಯ ದಿಃ30-07-2019 ರಂದು ವಜಾ ಮಾಡಿರುತ್ತದೆ ಎಂದರೆ ಸರಿ. ಅದರ ವಿರುದ್ಧ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು, ಎನ್.ಆರ್.ಪುರ ರ ನ್ಯಾಯಾಲಯದಲ್ಲಿ ಆರ್ ಎ ನಂ. 17/19 ರಂತೆ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಮೇಲ್ಮನವಿ ಇನ್ನೂ ಸಹ ಇತ್ಯರ್ಥ್ಯಕ್ಕೆ ಬಾಕಿ ಇರುತ್ತದೆ ಎಂದರೆ ಸರಿ.

3. ಈ ದಾವೆಯಲ್ಲಿ ದಾವಾ ಸ್ವತ್ತಿಗೆ ಸಂಬಂಧ ಪಟ್ಟಂತೆ ಚೆಕ್ ಬಂದಿ ಮತ್ತು ವಿಸ್ತೀರ್ಣದ ಬಗ್ಗೆ ತಪ್ಪಾಗಿದೆ ಎಂದು ಹೇಳಿದ್ದು, ಸದರಿ ವಿಷಯವನ್ನು ಒ ಎಸ್ 6/2010 ರಲ್ಲಿ ದಾವಾ ಪತ್ರದಲ್ಲಾಗಲೀ ಅಥವಾ ಸಾಕ್ಷಿ ನುಡಿಯುವ ಸಂದರ್ಭದಲ್ಲಾಗಲೀ ನಾನು ತಿಳಿಸಿರುವುದಿಲ್ಲ ಎಂದರೆ ಸರಿ. ಒ ಎಸ್ 6/2010 ರಲ್ಲಿ ದಾವೆಯನ್ನು ಪ್ರಸ್ತುತ ದಾವೆಯ 1 ನೇ ವಾದಿ ಎಂ.ಜಿ ರತ್ನಾಕರ ಹೆಗ್ಗಡೆ ಎನ್ನುವವರ ಬಳಿಯಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿರುವ ಬಗ್ಗೆ ತಿಳಿಸಿರುತ್ತೇವೆ ಎಂದರೆ ಸರಿ. ಪ್ರಸ್ತುತ ದಾವೆಯ 1 ನೇ ವಾದಿ ಎಂ.ಜಿ ರತ್ನಾಕರ ಹೆಗ್ಗಡೆ ಎನ್ನುವವರ ಬಳಿಯಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿರುವ ಸ್ವತ್ತಿಗೆ ಸಂಬಂಧ ಪಟ್ಟಂತೆ ಶಾಶ್ವತ ನಿರ್ಭಂಧಕಾಜ್ಞೆ ಕೋರಿ ಸದರಿ ಒ.ಎಸ್ 6/2010 ಅನ್ನು ಹೂಡಿದ್ದೆವು ಎಂದರೆ ಸರಿ.

4. ದಾವಾ ಆಸ್ತಿಗೆ ಸಂಬಂಧ ಪಟ್ಟಂತೆ ಒ ಎಸ್ 6/2010 ರಲ್ಲಿ ಪ್ರಸ್ತುತ ದಾವೆಯ 1ನೇ ವಾದಿ ತನಗೆ ಖರೀದಿ ಮುಖಾಂತರ ಬಂದ ಸ್ವತ್ತು ಎಂದು ತಿಳಿಸಿದ್ದು, ಸದರಿ ದಾವೆಯ ಪ್ರತಿವಾದಿ ರಾಜೇಂದ್ರ ಯಾನೆ ಸಂತೋಷ್ ಕುಮಾರ್ ರವರು ಸದರಿ ಆಸ್ತಿಯು ಅವರಿಗೆ ಹಿಸ್ಸೆ ಮುಖಾಂತರ ಬಂದಿರುತ್ತದೆ ಎಂದು ತಿಳಿಸಿದ್ದರು ಎಂದರೆ ಸರಿ. ಒ.ಎಸ್ 6/2010 ಚಾಲ್ತಿಯಲ್ಲಿದ್ದ ಸಂದರ್ಭದಲ್ಲಿ ಸದರಿ ದಾವೆಯ ಪ್ರತಿವಾದಿ ಅಂದರೆ ಪ್ರಸ್ತುತ ದಾವೆಯ 1ನೇ ಪ್ರತಿವಾದಿಯ ಗಂಡ ಹಾಗೂ 2ನೇ ಪ್ರತಿವಾದಿಯ ತಂದೆ ರತ್ನಾಕರ ಹೆಗ್ಗಡೆಯವರು ಜೀವಂತವಾಗಿದ್ದರು ಎಂದರೆ ಸರಿ. ರತ್ನಾಕರ ಹೆಗ್ಗಡೆಯವರು ದಿಃ 24-11-2014 ರಂದು ತೀರಿಕೊಂಡರುತ್ತಾರೆ ಎಂದರೆ ಸರಿ. ಒ.ಎಸ್ 6/2010 ರಲ್ಲಿ ರತ್ನಾಕರ ಹೆಗ್ಗಡೆರವರು ನ್ಯಾಯಾಲಯಕ್ಕೆ ಖುದ್ದಾಗಿ ಬಂದು ಸಾಕ್ಷಿ ನುಡಿಯಬೇಕು ಎಂದು ನಾವು ಅರ್ಜಿಯನ್ನು ಸಲ್ಲಿಸಿರುವುದಿಲ್ಲ.

5. ಪ್ರಸ್ತುತ ದಾವೆಯಲ್ಲಿ ದಾವಾ ಆಸ್ತಿಯ ಚೆಕ್ಕು ಬಂದಿ ಮತ್ತು ವಿಸ್ತೀರ್ಣ ಏರು-ಪೇರು ಆಗಿರುವ ಬಗ್ಗೆ ಒ.ಎಸ್ 6/2010 ರಲ್ಲಿ ನಾವು ಯಾವುದೇ ಪ್ರಸ್ತಾವನೆ ಮಾಡಿರುವುದಿಲ್ಲ ಎಂದರೆ ಸರಿ. 1ನೇ ವಾದಿಗೆ ಎಂ.ಜಿ ರತ್ನಾಕರ ಹೆಗ್ಗಡೆರವರು ಮಾರಾಟ ಮಾಡಿದ ಸ್ವತ್ತಿನ ಕ್ರಯಪತ್ರಕ್ಕೆ 1 ಮತ್ತು 2ನೇ ಪ್ರತಿವಾದಿಗಳು ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿ. ಸದರಿ ಸ್ವತ್ತಿನ ಕ್ರಯಪತ್ರ ನೊಂದಣಿ ಆಗುವ ಸಮಯದಲ್ಲಿ 2 ನೇ ಪ್ರತಿವಾದಿ ಅಪ್ರಾಪ್ತವಯಸ್ಕನಾಗಿದ್ದ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆದ ಕಾರಣ 1ನೇ ಮತ್ತು 2ನೇ ಪ್ರತಿವಾದಿಗಳಿಗೆ ಸದರಿ ಎಂ ಜಿ ರತ್ನಾಕರ ಹೆಗ್ಗಡೆರವರು 1ನೇ ವಾದಿಗೆ ಎಷ್ಟು ವಿಸ್ತೀರ್ಣ ಹಾಗೂ ಯಾವ ಚೆಕ್ಕು ಬಂದಿಯೊಳಗೆ ಇರುವ ಜಾಗವನ್ನು ಮಾರಾಟ ಮಾಡಿರುತ್ತಾರೆ ಎಂದು ಮಾಹಿತಿ ಇರಲು ಸಾಧ್ಯವಿಲ್ಲ ಎಂದರೆ ಸರಿ. ಎಂ ಜಿ ರತ್ನಾಕರ ಹೆಗ್ಗಡೆರವರು ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್ ಹಾಗೂ ಎ ದರ್ಜೆಯ-

ಗುತ್ತಿಗೆದಾರರಾಗಿದ್ದರು ಎಂದರೆ ಸರಿ. ಎಂ ಜಿ ರತ್ನಾಕರ ಹೆಗ್ಗಡೆರವರಿಗೆ ಸ್ವಂತ ದುಡಿಮೆ ಇತ್ತು ಎಂದರೆ ಸರಿ. ಆದ ಕಾರಣ ಅವರ ಸ್ವಂತ ದುಡ್ಡಿನಿಂದ ಯಾವ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದು ಅವರ ಪತ್ನಿ ಮತ್ತು ಮಗನಾದ 1 ನೇ ಮತ್ತು 2 ನೇ ಪ್ರತಿವಾದಿಗಳಿಗೆ ಗೊತ್ತಿರಲು ಸಾಧ್ಯವಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ವಾದಿಗೆ, ಎಂ ಜಿ ರತ್ನಾಕರ ಹೆಗ್ಗಡೆರವರು ಮಾರಾಟ ಮಾಡಿರುವ ಆಸ್ತಿ ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎಂ ಜಿ ರತ್ನಾಕರ ಹೆಗ್ಗಡೆರವರು ಮಾಡಿಕೊಟ್ಟ ಕ್ರಯ ಪತ್ರ ಅಂದರೆ ನಿಪಿ-4 ಅನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿಪಿ-4 ಕ್ರಯ ಪತ್ರದಲ್ಲಿ ಎಂ ಜಿ ರತ್ನಾಕರ ಹೆಗ್ಗಡೆ ರವರೇ ಸದರಿ ಆಸ್ತಿಯನ್ನು ಖರೀದಿ ಮಾಡಿರುವುದಾಗಿ ನಮೂದು ಇರುತ್ತದೆ ಎಂದರೆ ಸರಿ. ಪ್ರಸ್ತುತ ದಾವೆಯಲ್ಲಿ ಒ ಎಸ್ 6/2010 ರ ಪ್ರಕರಣದ ಬಗ್ಗೆಯಾಗಲೀ ಹಾಗೂ ಅದು ನಿರ್ಣಯವಾದ ಬಗ್ಗೆ ತಿಳಿಸಿರುತ್ತೇನೆ. ನನಗೆ ನಿಪಿ-4 ಕ್ರಯ ಪತ್ರದಲ್ಲಿ ಆಸ್ತಿಯ ವಿಸ್ತೀರ್ಣ ಹಾಗೂ ಚೆಕ್ಕು ಬಂದಿ ತಪ್ಪಾಗಿರುವ ವಿಚಾರ ನನಗೆ ದಾವಾ ಆಸ್ತಿಯನ್ನು ಸರ್ವೆ ಮಾಡಿಸುವ ಸಂದರ್ಭದಲ್ಲಿ ನವೆಂಬರ್ 2018 ರಲ್ಲಿ ಮೊದಲ ಬಾರಿಗೆ ತಿಳಿದು ಬಂದಿರುತ್ತದೆ. ಸದರಿ ವಿಚಾರವನ್ನು ನಾನು ಸಲ್ಲಿಸಿದ ಆರ್.ಎ ನಂ. 17/2019 ರ ಮೇಲ್ಮನವಿ ಪತ್ರದಲ್ಲಿ ತಿಳಿಸಿರುವುದಿಲ್ಲ. ನವೆಂಬರ್ 2018 ರಲ್ಲಿ ನಾನು ಸರ್ವೆ ಮಾಡಿಸುವ ಸಮಯದಲ್ಲಿ ರಾಜೇಂದ್ರ ಯಾನೆ ಸಂತೋಷ್ ಕುಮಾರ್ ರವರು ಹಾಜರಿರಲಿಲ್ಲ.

6. ದಾವಾ ಆಸ್ತಿಯ ಒಳಗೆ ಯಾವುದೇ ಮನೆ ಅಥವಾ ರಸ್ತೆ ಇರುವುದಿಲ್ಲ. ನಾನು ಈ ದಾವೆಯಲ್ಲಿ ಉದ್ದೇಶ ಪೂರ್ವಕವಾಗಿ ಅಗತ್ಯ ಪಕ್ಷಗಾರರರಾದ ರಾಜೇಂದ್ರ ಯಾನೆ ಸಂತೋಷ್ ಕುಮಾರ್ ರವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಈ ದಾವೆಯಲ್ಲಿ ಅವರನ್ನು ಪಕ್ಷಗಾರರನ್ನಾಗಿ ಮಾಡುವ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ.

**ಮುಂದುವರಿದ ಪಾಟೀ ಸವಾಲುಃ ಶ್ರೀ ಹೆಚ್ ಆರ್ ಯು ವಕೀಲರು ಕಾಲವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ದಿನಾಂಕಃ 05-06-2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

ಸಹಿ/-
**ಪ್ರ.ದ.ನ್ಯಾ.ದಂಃ ಶೃಂಗೇರಿ**